ದಿನಾಂಕಃ 31-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ವಾದಿ ಪರ ಶ್ರೀ ಎಂ.ಎಸ್.ಎಂ. ವಕೀಲರಿಂದ:

ನಾನು ಒಕ್ಕಲುತನ ಕೆಲಸ ಮಾಡುತ್ತೇನೆ. ನಮ್ಮ ಕುಟುಂಬಕ್ಕೆ ಒಟ್ಟು 25 ಎಕರೆ ಜಮೀನು ವೆಂಕಟಾಪೂರ ಗ್ರಾಮದಲ್ಲಿ ಇರುತ್ತದೆ. ನನ್ನ ಹೆಸರಿನಲ್ಲಿ ಒಟ್ಟು 8 ಎಕರೆ ಜಮೀನು ಇರುತ್ತದೆ. ನನ್ನ ಹೆಸರಿನಲ್ಲಿರುವ ಜಮೀನು ಸರ್ವೆ ನಂ.105/1 ಮತ್ತು 105/2 ಎಂದರೆ ಸರಿ. ಕರ್ನಾಟಕ ಬ್ಯಾಂಕ್ ಮಹಾಲಿಂಗಪೂರ ಶಾಖೆಯಲ್ಲಿ ನಾನು ಸಾಲವನ್ನು ಪಡೆದಿದ್ದೆನು, ಆದರೆ ಎಷ್ಟು ಸಾಲ ಮತ್ತು ಯಾವಾಗ ಪಡೆದಿರುತ್ತಾರೆ ಎಂದು ನನ್ನ ಗಂಡನಿಗೆ ಗೊತ್ತು. ನನ್ನ ಗಂಡನ ಹೆಸರಿನಲ್ಲಿ ಜಮೀನು ಸರ್ವೆ ನಂ.101/1 ಕ್ಷೇತ್ರ 12 ಎಕರೆ ಇದೆ ಎಂದರೆ ಸರಿ. ಸದರಿ ಜಮೀನಿನ ಮೇಲೆ ನನ್ನ ಗಂಡ ಕರ್ನಾಟಕ ಬ್ಯಾಂಕ್ ಮಹಾಲಿಂಗಪೂರದಲ್ಲಿ ಸಾಲ ಪಡೆದಿರುತ್ತಾನೆ ಎಂದರೆ ಸರಿ. ಜಮೀನುಗಳ ಮೇಲೆ 2013 ರಲ್ಲಿ ನಾವು ವಾದಿ ಬ್ಯಾಂಕಿನಿಂದ ಸಾಲ ಪಡೆದಿರುತ್ತೇವೆ ಎಂದರೆ ಗೊತ್ತಿಲ್ಲ. ಆದರೆ ಸಾಕ್ಷಿ ನಾನು ಮತ್ತು ನನ್ನ ಗಂಡ ಒಂದೇ ವರ್ಷ ಸಾಲ ಪಡೆರುತ್ತೇವೆ ಎಂದು ಹೇಳುತ್ತಾರೆ. ನಾನು, ನನ್ನ ಗಂಡ ಕೂಡಿಕೊಂಡು, ಬ್ಯಾಂಕಿನವರು ಬರೆದುಕೊಟ್ಟ ದಾಖಲೆಯನ್ನು ತೆಗೆದುಕೊಂಡು ಗೋಕಾಕಗೆ ಹೋಗಿದ್ದೆವು ಎಂದರೆ ಸರಿ. ನಾನು ಮತ್ತು ನನ್ನ ಗಂಡ ಕೂಡಿಕೊಂಡು ಉಪ ನೋಂದಣಿ ಕಛೇರಿ ಗೋಕಾಕನಲ್ಲಿ ಅಡಮಾನ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಬ್ಯಾಂಕಿನವರು ಮಂಜೂರು ಮಾಡಿದ ಸಾಲವನ್ನು ಮೊದಲನೆಯ ವರ್ಷ 4 ಲಕ್ಷ, 2 ನೇ ವರ್ಷ ರೂ.4,40,000/-, 3 ನೇ ವರ್ಷ ರೂ.4,84,000/-, 4 ನೇ ವರ್ಷ ರೂ.5,32,000/- ಮತ್ತು 5 ನೇ ವರ್ಷ ರೂ.5,85,000/- ಕೊಡಲು ಒಪ್ಪಿಗೆ ಆಗಿತ್ತು ಎಂದರೆ ಆಗಿರಬಹುದು, ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 29-08-2013 ರಂದು ವಾದಿ ಬ್ಯಾಂಕಿನವರು ನನ್ನ ಎಸ್.ಬಿ. ಖಾತೆಗೆ ರೂ.75,000/- ಜಮೆ ಮಾಡಿರುತ್ತಾರೆ ಹಾಗೂ ಬೇರೆ ಸಾಲಕ್ಕೆ ಒಟ್ಟು ರೂ.3,20,000/- ಜಮೆ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕಃ 14-10-2014 ರಂದು ನಾನು ಸದರಿ ಸಾಲವನ್ನು ಮರುಪಾವತಿ ಮಾಡಿರುತ್ತೇನೆ, ನಂತರ ಬ್ಯಾಂಕಿನವರು ದಿನಾಂಕಃ 16-10-2014 ರಂದು ನನ್ನ ಖಾತೆಗೆ ಪುನಃ ರೂ.4,40,000/- ಸಾಲದ ರೂಪಾದಲ್ಲಿ ಜಮೆ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕಃ 29-04-2015 ರಂದು ಬ್ಯಾಂಕಿನವರು

ಪುನಃ ಸಾಲ ಮಂಜೂರ ಮಾಡಿ ನನ್ನ ಖಾತೆಗೆ ಖರ್ಚು ಹಾಕಿರುತ್ತಾರೆ ಎಂದರೆ ಸರಿ. ದಿನಾಂಕಃ 07-09-2017 ರಂದು ನಾನು ರೂ.1,00,000/- ಬ್ಯಾಂಕಿಗೆ ಜಮೆ ಮಾಡಿರುತ್ತೇನೆ ಎಂದರೆ ಸರಿ. ತದನಂತರ ನಾನು ಬ್ಯಾಂಕಿಗೆ ಹೋಗಿ ಸಾಲ ಪಡೆಯುವುದಾಗಿ ಮತ್ತು ತುಂಬುವುದಾಗಿ ಮಾಡಿರುವುದಿಲ್ಲ ಎಂದರೆ ಸರಿ. ಮೊದಲು ಪಡೆದ ಸಾಲ 4 ಲಕ್ಷ ರೂಪಾಯಿ, ಅದನ್ನು ತುಂಬಿದ ನಂತರ 2 ನೇ ಸಾಲ ರೂ.4,40,000/- ಕ್ಕೆ ಮಾತ್ರ ಬಡ್ಡಿ ಸೇರಿಸಿ ಈ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. .

ನಾನು ಪಡೆದ ಸಾಲಕ್ಕೆ 2 ನೇ ಪ್ರತಿವಾದಿ ಜಾಮೀನು ನೀಡಿರುತ್ತಾನೆ. ಸಾಲ ಸರಿಯಾದ ಸಮಯದಲ್ಲಿ ಮರುಪಾವತಿ ಮಾಡದೇ ಇರುವುದರಿಂದ ನಾನು ಮತ್ತು 2 ನೇ ಪ್ರತಿವಾದಿ ಬ್ಯಾಂಕಿಗೆ ಹೋಗಿ ಅವರಿಗೆ ಕಾಲಾವಕಾಶ ಕೋರಿ ದಾಖಲೆಗಳ ಮೇಲೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿನಾಂಕಃ 04-03-2021 ರಂದು ಬ್ಯಾಂಕಿನವರು ನನಗೆ ಮತ್ತು 2 ನೇ ಪ್ರತಿವಾದಿಗೆ ನೋಟಿಸ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನೋಟಿಸ ಪಡೆದ ನಂತರ ಬ್ಯಾಂಕಿಗೆ ಹೋಗಿ ಭೇಟಿಯಾಗಿರುವುದಾಗಿ ಹೇಳುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ಬ್ಯಾಂಕಿಗೆ ಹೋಗಿ ಸಾಲ ಮರುಪಾವತಿ ಮಾಡಲು ಕಾಲಾವಕಾಶ ಕೊಡುವಂತೆ ಕೇಳಿರುತ್ತೇನೆ. ಬ್ಯಾಂಕಿನವರು ಹಣ ಮರುಪಾವತಿ ಮಾಡಲು ಕಾಲಾವಕಾಶ ನೀಡಿದ್ದರೂ ನಾವು ಮರುಪಾವತಿ ಮಾಡದೇ ಇರುವುದರಿಂದ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಇವತ್ತಿನವರೆಗೂ, ಬ್ಯಾಂಕಿಗೆ ಹೋಗಿ ಪರಿಶೀಲನೆ ಮಾಡಿ ಸಾಲದ ಮೊತ್ತವನ್ನು ಮರುಪಾವತಿ ಮಾಡಲು ತಯಾರು ಇರುತ್ತೇನೆ. ನನ್ನ ಗಂಡ ಪಡೆದ ಸಾಲ ಇಲ್ಲಿಯವರೆಗೆ ಮರುಪಾವತಿ ಮಾಡಿಲ್ಲ ಎಂದರೆ ಸರಿ. ಬ್ಯಾಂಕಿನವರು ನಾವು ಪಡೆದ ಸಾಲಕ್ಕೆ ಮಾತ್ರ ಬಡ್ಡಿ ಹಾಕಿ ಪ್ರಕರಣ ದಾಖಲು ಮಾಡಿರುತ್ತಾರೆ, ಹೆಚ್ಚಿನ ಬಡ್ಡಿ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2026.01.31 17:01:01 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ